KABR320044242021

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ**

**ನ್ಯಾಯಾಲಯ, ದೇವನಹಳ್ಳಿ.**

**ದಿನಾಂಕ 9ನೇ ಏಪ್ರಿಲ್ 2026.**

**ಉಪಸ್ಥಿತರು**

**ಶ್ರೀ.ವೆಂಕಟೇಶ.ಎನ್., ಬಿ.ಎ.ಎಲ್.ಎಲ್.ಬಿ., ಎಲ್.ಎಲ್.ಎಮ್.,**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,
ದೇವನಹಳ್ಳಿ.

**ದಂಡ ಪ್ರಕರಣ ಸಂಖ್ಯೆ.3842/2021**

ಫಿರ್ಯಾದುದಾರರುಃ **ರಾಜ್ಯದ ಪರವಾಗಿ ಬಾಗಲೂರು ಪೊಲೀಸ್ ಠಾಣೆ**

**(ಪ್ರತಿನಿಧಿಸುವವರು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು)**

**ವಿರುದ್ಧ**

ಆರೋಪಿಗಳುಃ **1.** **ಗೋವಿಂದಪ್ಪ. ಹೆಚ್, 54** ವರ್ಷ,
ಬಿನ್ ಹನುಮಪ್ಪ,
ವಾಸ: ಡೈರಿ ಹಿಂಭಾಗದ ರಸ್ತೆ, ಸಿಂಗಹಳ್ಳಿ ಗ್ರಾಮ,
ಜಾಲ ಹೋಬಳಿ, ಬೆಂಗಳೂರು ಉತ್ತರ ತಲ್ಲೂಕು.

**2.** **ಚಿಕ್ಕ ಅಂಜಿನಪ್ಪ @ ಅಂಜಿನಪ್ಪ, 75 ವರ್ಷ,**
ಬಿನ್ ಹನುಮಪ್ಪ,
ವಾಸ: ಸಿಂಗಹಳ್ಳಿ ಗ್ರಾಮ,
ಜಾಲ ಹೋಬಳಿ, ಬೆಂಗಳೂರು ಉತ್ತರ ತಲ್ಲೂಕು.

**3.** **ವೆಂಕಟೇಶಪ್ಪ, 60 ವರ್ಷ,**
ಬಿನ್ ಹನುಮಪ್ಪ,
ವಾಸ: ಸಿಂಗಹಳ್ಳಿ ಗ್ರಾಮ,
ಜಾಲ ಹೋಬಳಿ, ಬೆಂಗಳೂರು ಉತ್ತರ ತಲ್ಲೂಕು.

**(ಪ್ರತಿನಿಧಿಸಿದವರುಃ ಶ್ರೀ. ಎನ್.ವಿ.ಎಸ್., ವಕೀಲರು)**

| | |
|---|---|
| ಪ್ರಕರಣ ನಡೆದ ದಿನಾಂಕ : | 10.03.2021 |
| ಪ್ರಕರಣ ದಾಖಲಾದ ದಿನಾಂಕ : | 10.03.2021 |
| ಸಾಕ್ಷ್ಯ ವಿಚಾರಣೆ ಪ್ರಾರಂಭವಾದ ದಿನಾಂಕ : | 21.03.2024 |
| ವಿಚಾರಣೆ ಮುಕ್ತಾಯವಾದ ದಿನಾಂಕ : | 10.02.2026 |
| ಆಪಾದಿಸಲ್ಪಟ್ಟ ಅಪರಾಧಗಳು : | ಭಾರತೀಯ ದಂಡ ಸಂಹಿತೆ ಕಲಂ 323, 324, 504, 506 ಸಹವಾಚಕ 34 |
| ಪ್ರಕರಣ ಮುಕ್ತಾಯವಾದ ದಿನಾಂಕ : | **09.04.2026** |
| ನ್ಯಾಯಾಧೀಶರ ಅಭಿಪ್ರಾಯ : | ದೋಷಮುಕ್ತ |
| ನ್ಯಾಯಾಂಗ ಬಂದನವನ್ನು ಅನುಭವಿಸಿದ ಅವಧಿ : | ವರ್ಷ **04** / ತಿಂಗಳು **00** / ದಿನ **30** |

**: ತೀರ್ಪು :**

ಬಾಗಲೂರು ಪೊಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರು ಆರೋಪಿಗಳ ವಿರುದ್ದ ಭಾರತೀಯ ದಂಡ ಸಂಹಿತೆ ಕಲಂ 323, 324, 504, 506 ಸಹವಾಚಕ 34ರಡಿಯಲ್ಲಿ ಈ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2. ಅಭಿಯೋಜನೆಯಂತೆ ಈ ಪ್ರಕರಣದ ಮುಖ್ಯ ಸಾರಾಂಶ ಈ ಕೆಳಕಂಡಂತೆ ಇದೆಃ**

1 ರಿಂದ 3ನೇ ಆರೋಪಿಗಳಿಗೂ ಮತ್ತು ಚಾಸಾ-1 ರವರಿಗೂ ಬಾಗಲೂರು ಪೊಲೀಸ್ ಠಾಣಾ ಸರಹದ್ದಿನ ಸಿಂಗಹಳ್ಳಿ ಗ್ರಾಮದ ಸರ್ವೆ ನಂ.91/8 ರಲ್ಲಿ ನೀಲಗಿರಿ ತೋಪಿನ ವಿಚಾರವಾಗಿ ತಕರಾರು ಇರುತ್ತದೆ. ಹೀಗಿರುವಾಗ ದಿನಾಂಕ 09.03.2021 ರಂದು ಬೆಳಿಗ್ಗೆ ಸುಮಾರು 8.30 ಗಂಟೆ ಸಮಯದಲ್ಲಿ ಚಾಸಾ-1 ರವರು ಸದರಿ ನೀಲಗಿರಿ ತೋಪಿನ ಬಳಿಗೆ ಹೋದಾಗ ಆರೋಪಿಗಳು ಅಲ್ಲಿದ್ದು, ಆಗ ಚಾಸಾ-1 ರವರು ಆರೋಪಿಗಳಿಗೆ ತೋಪಿನ ವಿಚಾರವಾಗಿ ಕೇಸು ನಡೆಯುತ್ತಿದ್ದರೂ ಸಹ ಯಾಕೇ ನೀವುಗಳು ಇಲ್ಲಿಗೆ ಬಂದು ಈ ತರ ಮಾಡುತ್ತಿದ್ದೀರಾ ಎಂದು ಕೇಳಿದಕ್ಕೆ ಆರೋಪಿಗಳು ಚಾಸಾ-1 ರವರಿಗೆ ಇದನ್ನು ಕೇಳೂದಕ್ಕೆ ನಿನ್ಯಾರೋ ಬೋಳಿ ಮಗನೆ, ಸೂಳೆ ಮಗನೆ ಎಂದು ಅವಾಚ್ಯ ಶಬ್ದಗಳಿದದಿ ಬೈದು, 2 ಮತ್ತು 3ನೇ ಆರೋಪಿಗಳು ಚಾಸಾ-1 ರವರ ಕತ್ತಿನ ಪಟ್ಟಿಯನ್ನು ಹಿಡಿದುಕೊಂಡು ತಮ್ಮ ಕೈಯಿಂದ ಚಾಸಾ-1 ರವರ ಮೈಗೆ ಹೊಡೆದಿರುತ್ತಾರೆ. 1ನೇ

ಆರೋಪಿಯು ನೀಲಗಿರಿ ದೊಣ್ಣೆಯಿಂದ ಚಾಸಾ-1 ರವರ ಬೆನ್ನಿಗೆ ಹೊಡೆದು ಸಾಮಾನ್ಯ ಗಾಯವನ್ನುಂಟು ಮಾಡಿರುತ್ತಾನೆ. ನಂತರ ಆರೋಪಿಗಳೆಲ್ಲರೂ ಸೇರಿ ಇನ್ನೊಂದು ಸಾರಿ ನನ್ನ ತಂಟೆಗೆ ಬಂದರೆ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲವೆಂದು ಚಾಸಾ-1 ರವರಿಗೆ ಪ್ರಾಣ ಬೆದರಿಕೆ ಹಾಕಿರುವುದು ತನಿಖೆಯಿಂದ ದೃಢಪಟ್ಟಿದೆ. ಅದರಂತೆ ಆರೋಪಿಗಳ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 323, 324, 504, 506 ಸಹವಾಚಕ 34ರಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ.

**3.** ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿದ ನಂತರ ಆರೋಪಿಗಳ ವಿರುದ್ಧ ಸಂಜ್ಞಾನೆಯನ್ನು ತೆಗೆದುಕೊಂಡು ಸಮನ್ಸ್ ಜಾರಿ ಮಾಡಲಾಗಿದೆ. ಆರೋಪಿಗಳು ತಮ್ಮ ವಕೀಲರ ಮೂಲಕ ಹಾಜರಾಗಿ ಜಾಮೀನು ಪಡೆದುಕೊಂಡಿರುತ್ತಾರೆ.

**4.** ಆರೋಪಿಗಳಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರಡಿಯಲ್ಲಿ ದೋಷಾರೋಪಣಾ ಪಟ್ಟಿಯ ನಕಲನ್ನು ಹಾಗೂ ಇತರೆ ದಾಖಲಾತಿಗಳನ್ನು ಪೂರೈಸಲಾಯಿತು. ಆಪಾದನೆಯನ್ನು ರಚಿಸುವ ಪೂರ್ವದಲ್ಲಿ ವಕೀಲರ ಮತ್ತು ಸಹಾಯಕ ಸರ್ಕಾರಿ ಅಭಿಯೋಜಕರವರ ವಾದ ಕೇಳಿ ಆಪಾದನೆಯನ್ನು ರಚಿಸಲಾಯಿತು. ಅದನ್ನು ಆರೋಪಿಗಳಿಗೆ ಓದಿ ಹೇಳಲಾಯಿತು. ಆರೋಪಿಗಳು ತಮ್ಮ ವಿರುದ್ದ ಹೊರಿಸಿರುವ ಆಪಾದನೆಗಳನ್ನು ಅಲ್ಲಗಳೆದಿರುತ್ತಾರೆ ಮತ್ತು ವಿಚಾರಣೆಯಾಗಬೇಕೆಂದು ಕೋರಿರುತ್ತಾರೆ.

**5.** ಅಭಿಯೋಜನೆಯವರು ತಮ್ಮ ಪ್ರಕರಣವನ್ನು ಋಜುವಾತುಪಡಿಸಲು ಅವಕಾಶ ನೀಡಲಾಗಿ ತಮ್ಮ ಪರವಾಗಿ ಆರೋಪಿಗಳ ವಿರುದ್ದ ಆಪಾದನೆಯನ್ನು ಸಾಬೀತುಪಡಿಸುವ ಉದ್ದೇಶದಿಂದ ಪ್ರಾಸಾ.1 ರಿಂದ 6 ರವರನ್ನು ವಿಚಾರಣೆಗೆ ಒಳಪಡಿಸಿದ್ದು, ನಿಪಿ.1 ರಿಂದ 5 ರವರೆಗಿನ ದಾಖಲಾತಿಗಳನ್ನು ಹಾಗೂ ಮುದ್ದೆ ಮಾಲು.1ನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ.

**6.** ಅಭಿಯೋಜನೆಯ ಪರ ಸಾಕ್ಷಿ ವಿಚಾರಣೆ ಮುಗಿದ ಬಳಿಕ ಆರೋಪಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 313ರಡಿಯಲ್ಲಿ ಆರೋಪಿಗಳ ವಿರುದ್ದ ಕಂಡುಬರುವ ಸಾಕ್ಷಿ ವಿಚಾರಣೆ ಅಂಶಗಳನ್ನು ಓದಿ ಹೇಳಲಾಗಿ,

ಆರೋಪಿಗಳು ತಮ್ಮ ವಿರುದ್ದದ ಸಾಕ್ಷ್ಯಾಂಶಗಳನ್ನು ಅಲ್ಲಗಳೆದಿರುತ್ತಾರೆ ಮತ್ತು ತಮ್ಮ ಪರವಾಗಿ ಯಾವುದೇ ಸಾಕ್ಷ್ಯವಿರುವುದಿಲ್ಲವೆಂದು ನುಡಿದಿರುತ್ತಾರೆ.

**7.** ಎರಡು ಕಡೆಯ ವಾದವನ್ನು ಕೇಳಲಾಯಿತು.

**8. ಪ್ರಸ್ತುತ ಪ್ರಕರಣದಲ್ಲಿ ಈ ಕೆಳಕಂಡ ಅಂಶಗಳು ಪರಿಗಣನೆಗೆ ಕಂಡುಬಂದಿರುತ್ತವೆ.**

**1.** ದಿ 09.03.2021 ರಂದು ಬೆಳಿಗ್ಗೆ ಸುಮಾರು 8.30ರ ಸಮಯದಲ್ಲಿ ಬಾಗಲೂರು ಪೊಲೀಸ್ ಠಾಣಾ ಸರಹದ್ದು ಸಿಂಗಹಳ್ಳಿ ಗ್ರಾಮದಲ್ಲಿ ಆರೋಪಿತರಾದ ಅಪರಾಧ ಮಾಡುವ ಸಮಾನ ಉದ್ದೇಶದಿಂದ 2 ಮತ್ತು 3ನೇ ಆರೋಪಿತರು ಚಾಸಾ-1 ರವರ ಕತ್ತಿನ ಪಟ್ಟಿಯನ್ನು ಹಿಡಿದುಕೊಂಡು ಕೈಗಳಿಂದ ಹಲ್ಲೆ ಮಾಡಿ ನೋವುಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ 34ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಋಜುವಾತುಪಡಿಸುವರೇ?

**2**. ಮೇಲಿನ ಸ್ಥಳ ದಿನಾಂಕ ಮತ್ತು ಸಮಯದಂದು ಆರೋಪಿತರಾದ ಕೃತ್ಯ ಎಸಗುವ ಸಮಾನ ಉದ್ದೇಶದಿಂದ 1ನೇ ಆರೋಪಿಯು ಚಾಸಾ-1 ರವರಿಗೆ ನೀಲಗಿರಿ ದೊಣ್ಣೆಯಿಂದ ಹಲ್ಲೆ ಮಾ ರಕ್ತ ಗಾಯ ಪಡಿಸಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ 34ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಋಜುವಾತುಪಡಿಸುವರೇ?

**3**. ಮೇಲಿನ ಸ್ಥಳ ದಿನಾಂಕ ಮತ್ತು ಸಮಯದಂದು ಆರೋಪಿತರಾದ ಕೃತ್ಯ ಎಸಗುವ ಸಮಾನ ಉದ್ದೇಶದಿಂದ ಸಾರ್ವಜನಿಕ ರಸ್ತೆಯಲ್ಲಿ ಶಾಂತಿ ಭಂಗ ಆಗುತ್ತದೆಂದು ಗೊತ್ತಿದ್ದರು ಸಹ ಚಾಸಾ-1 ರವರನ್ನು ಉದ್ದೇಶಿಸಿ ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ 34ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಋಜುವಾತುಪಡಿಸುವರೇ?

**4**. ಮೇಲಿನ ಸ್ಥಳ ದಿನಾಂಕ ಮತ್ತು ಸಮಯದಂದು ಆರೋಪಿತರಾದ ಕೃತ್ಯ ಎಸಗುವ ಸಮಾನ ಉದ್ದೇಶದಿಂದ ಚಾಸಾ-1ರವರನ್ನು ಕುರಿತು ನಿನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ 34ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಋಜುವಾತುಪಡಿಸುವರೇ?

**5**. ಯಾವ ಆದೇಶ?

**9**. ಈ ಮೇಲ್ಕಂಡ ಅಂಶಗಳಿಗೆ ಈ ಮುಂದೆ ಹೇಳಲಾದ ಕಾರಣಗಳಿಂದ ಈ ಕೆಳಕಂಡಂತೆ ಉತ್ತರಿಸಲಾಗಿದೆಃ-

ಅಂಶ 1 ರಿಂದ 4: **ನಕಾರಾತ್ಮಕವಾಗಿ**

ಅಂಶ 5: ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ.

**<u>ಕಾರಣಗಳು</u>**

**10.** **<u>ಅಂಶ 1 ರಿಂದ 4</u>:-** ಈ ಅಂಶಗಳು ಒಂದಕ್ಕೊಂದು ಹೊಂದಿಕೊಂಡಿರುವುದರಿಂದ ಮತ್ತು ಪುನರಾವರ್ತವನೆಯನ್ನು ತಪ್ಪಿಸುವ ಉದ್ದೇಶದಿಂದ ಅವುಗಳನ್ನು ಒಟ್ಟಿಗೆ ವಿಮರ್ಶೆಗೆ ತೆಗೆದುಕೊಳ್ಳಲಾಗಿದೆ.

ಅಭಿಯೋಜನೆಯವರು ಆರೋಪಿಗಳ ವಿರುದ್ದ ಹೊರಿಸಿರುವ ಆಪಾದನೆಯನ್ನು ಸಾಬೀತುಪಡಿಸುವ ಸಲುವಾಗಿ ಪ್ರಾಸಾ.1 ರಿಂದ 6 ರವರನ್ನು ತಮ್ಮ ಪರ ಸಾಕ್ಷಿಗಳಾಗಿ ವಿಚಾರಣೆಗೆ ಒಳಪಡಿಸಿದ್ದು, ನಿಪಿ-1 ರಿಂದ 5 ಹಾಗೂ ಮುದ್ದೆ ಮಾಲು.1ನ್ನು ದಾಖಲಾತಿಗಳನ್ನು ತನ್ನ ಪರವಾಗಿ ಗುರ್ತಿಸಿಕೊಂಡಿರುತ್ತಾರೆ.

**11**. ಅಭಿಯೋಜನೆಯವರು ಆರೋಪಿಯ ವಿರುದ್ದ ಆರೋಪಿಸಿರುವ ಅಪಾದನೆಯನ್ನು ಸಾಬೀತು ಪಡಿಸುವ ನಿಟ್ಟಿನಲ್ಲಿ **ಚಾಸಾ 1 ರವರನ್ನು ಪ್ರಾಸಾ 1** ಎಂದು ವಿಚಾರಣೆಗೆ ಒಳಪಡಿಸಿದ್ದು, ಚಾಸಾ-4 ನನ್ನ ಮಗ ಮತ್ತು 3 ರವರ ಪರಿಚಯ ಇರುತ್ತದೆ. ಆರೋಪಿತರ ಪರಿಚಯ ಇರುತ್ತದೆ. ದಿ 09.03.2021 ರಂದು ಬೆಳಿಗ್ಗೆ 08.30 ಗಂಟೆಗೆ ನಾನು ನಮ್ಮ ಜಮೀನಿನ ಬಳಿ ಹೋಗಿದ್ದು, ನಮ್ಮ ಜಮೀನಿಗೆ ಸಂಬಂಧಿಸಿದಂತೆ ವಿಭಾಗಕ್ಕಾಗಿ ಸಿವಿಲ್ ನ್ಯಾಯಾಲಯದಲ್ಲಿ ದಾವೆಗಳು ಚಾಲ್ತಿಯಲ್ಲಿರುತ್ತದೆ. ಆ ರೀತಿ ಸರ್ವೆ ನಂ.91/8 ರಲ್ಲಿ ನೀಲಗಿರಿ ತೋಪು ಇದ್ದು ಅದರಲ್ಲಿ ಇದ್ದ ಮರಗಳನ್ನು ಆರೋಪಿಗಳು ಮಾರಾಟ ಮಾಡಿ ಕಡಿಸುತ್ತಿದ್ದರು. ತಕ್ಷಣ ನಾನು ಮತ್ತು ನನ್ನ ಹೆಂಡತಿ ಸ್ಥಳಕ್ಕೆ ಹೋಗಿದ್ದು ಆಗ 3 ಜನ ಆರೋಪಿಗಳು ನೀಲಗಿರಿ ತೋಪಿನ ಬಳಿ ಇದ್ದು, ನಾನು ಸದರಿ 3 ಜನ ಆರೋಪಿಗಳನ್ನು ಯಾಕೆ ನೀಲಗಿರಿ ಮರಗಳನ್ನು ಕಡಿಸುತ್ತಿದ್ದೀರಿ ಈಗಾಗಲೇ ಸಿವಿಲ್ ದಾವೆ ವಿಭಾಗಕ್ಕಾಗಿ ಚಾಲ್ತಿಯಲ್ಲಿದೆ ಎಂದು ಕೇಳಿದಾಗ 2ನೇ ಆರೋಪಿ ನನ್ನ ಕೈ ಹಿಡಿದು ಕೊಂಡಿದ್ದು, 3ನೇ ಆರೋಪಿ ನನ್ನ ಕುತ್ತಿಗೆ ಪಟ್ಟಿ ಹಿಡಿದುಕೊಂಡನು. ಆಗ 1ನೇ ಆರೋಪಿ ನೀಲಗಿರಿ ದೊಣ್ಣೆಯನ್ನು ತೆಗೆದುಕೊಂಡು ನನ್ನ ಬೆನ್ನಿಗೆ ಹೊಡೆದನು. ಆಗ ನಾನು ಜ್ಞಾನತಪ್ಪಿ ಕೆಳಗೆ ಬಿದ್ದಿದ್ದು, ನನ್ನ ಹೆಂಡತಿ ಬಾಯಿಬಡಿದು ಕೊಂಡು ಯಾರಿಗೋ ದೂರವಾಣಿ ಕರೆ ಮಾಡಿದ್ದರು, ಆಗ ಚಾಸಾ-3 ಮತ್ತು 4 ರವರು ನನ್ನನ್ನು ಮನೆಗೆ ಕರೆದುಕೊಂಡು ಬಂದು ನಂತರ ನನಗೆ ಉಸಿರಾಟದ ತೊಂದರೆ ಆದ ಕಾರಣ ಅವರು ನನಗ ಖಾಸಗಿ ಆಸ್ಪತ್ರೆಗೆ ಹೋಗಿ ಅಲ್ಲಿ ಪ್ರಥಮ ಚಿಕಿತ್ಸೆ ಪಡೆದುಕೊಂಡು ನಂತರ ಯಲಹಂಕ ಸರ್ಕಾರಿ ಆಸ್ಪತ್ರೆಗೆ ಹೋಗಿ ದಾಖಲಾಗಿರುತ್ತೇನೆ. ಮರು ದಿನ ನಾನು ಆಸ್ಪತ್ರೆಯಿಂದ ಬಂದು ದಿ 10.03.2021 ರಂದು ಬಾಗಲೂರು ಪೋಲಿಸರು ದೂರು ನೀಡಿರುತ್ತೇನೆ. ದಿ 11.03.2021 ರಂದು ಚಾಸಾ-8 ಮತ್ತು ಇಬ್ಬರು ಪೋಲಿಸ್ ಸಿಬ್ಬಂದಿಗಳು ಸ್ಥಳಕ್ಕೆ ಬಂದು ಮಹಜರ್ ಮಾಡಿರುತ್ತಾರೆ. ಆ ಸಮಯದಲ್ಲಿ ಚಾಸಾ-2 ಮತ್ತು 3 ರವರು ಹಾಜರಿದ್ದರು. ಆ ಸಮಯದಲ್ಲಿ ಹಲ್ಲೆಗೆ ಉಪಯೋಗಿಸಿದ್ದ ದೊಣ್ಣೆಯನ್ನು ಸ್ವಾಧೀನ ಪಡಿಸಿಕೊಂಡಿರುತ್ತಾರೆ. ಆ ರೀತಿ ಮಹಜರ್ ಬರೆದು ನನ್ನ

ಸಹಿಯನ್ನು ಪಡೆದುಕೊಂಡಿರುತ್ತಾರೆ. ಆರೋಪಿ ನನಗೆ ಹಲ್ಲೆ ಮಾಡಿದ್ದ ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ದೊಣ್ಣೆಯನ್ನು ನೋಡಿ ಗುರುತಿಸಿರುತ್ತಾರೆ. ನನಗೆ ಹಲ್ಲೆ ಮಾಡಿದ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 2 ಮತ್ತು 3ನೇ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ. 1ನೇ ಆರೋಪಿ ಗೈರು ಹಾಜರಾಗಿದ್ದು, ಅವರನ್ನು ಗುರುತಿಸುವ ಬಗ್ಗೆ ಆರೋಪಿಯ ಪರ ವಕೀಲರು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

**12.** ಅಭಿಯೋಜನೆಯವರು ಆರೋಪಿಯ ವಿರುದ್ದ ಆರೋಪಿಸಿರುವ ಅಪಾದನೆಯನ್ನು ಸಾಬೀತು ಪಡಿಸುವ ನಿಟ್ಟಿನಲ್ಲಿ **ಚಾಸಾ 3 ರವರನ್ನು ಪ್ರಾಸಾ 2** ಎಂದು ವಿಚಾರಣೆಗೆ ಒಳಪಡಿಸಿದ್ದು, ದಿಃ 09.03.2021 ರಂದು 8.30 ಗಂಟೆಗೆ ನಾನು ತೋಟದಲ್ಲಿ ಕೆಲಸ ಮಾಡುವಾಗ ನಮ್ಮ ತೋಟದಲ್ಲಿ ಪಕ್ಕದಲ್ಲಿ ನೀಲಗಿರಿ ತೋಪು ಇದ್ದು, ಸದರಿ ತೋಪಿನಲ್ಲಿ ಆರೋಪಿಗಳು ನೀಲಗಿರಿ ಮರಗಳನ್ನು ಕಡಿಸುತ್ತಿದ್ದರು. ಆ ಸಮಯಕ್ಕೆ ಚಾಸಾ-1 ಮತ್ತು ಅವರ ಹೆಂಡತಿ ಬಂದು ಆರೋಪಿಗಳನ್ನು ಈ ಆಸ್ತಿಯ ಮೇಲೆ ಕೇಸು ಇದೆ ಯಾಕೆ ಯಾಕೆ ಮರಗಳನ್ನು ಕಡಿಸುತ್ತಿದ್ದೀರಿ ಎಂದು ಕೇಳಿದಾಗ, ಇದನ್ನು ಕೇಳಲು ನೀನು ಯಾರು ಎಂದು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಆರೋಪಿ 2 ಮತ್ತು 3 ರವರು ಚಾಸಾ-1 ರವರ ಕುತ್ತಿಗೆ ಪಟ್ಟಿಯನ್ನು ಹಿಡಿದುಕೊಂಡು ಹಲ್ಲೆ ಮಾಡಿದರು. ಆ ಸಮಯಕ್ಕೆ 1ನೇ ಆರೋಪಿ ನೀಲಗಿರಿ ಮರದ ದೊಣ್ಣೆಯಿಂದ ಚಾಸಾ-1 ರವರ ಬೆನ್ನಿಗೆ ಹೊಡೆದರು, ಆಗ ಚಾಸಾ-1 ರವರು ಕುಸಿದು ಬಿದ್ದರು. ತಕ್ಷಣ ನಾವೆಲ್ಲರೂ ಅವರಿಗೆ ನೀರು ಕುಡಿಸಿದೆವು. ಆಗ ಚಾಸಾ-4 ರವರು ಕಾರು ತೆಗೆದುಕೊಂಡು ಬಂದಿದ್ದು ಚಾಸಾ-1 ರವರನು ಕರೆದುಕೊಂಡು ಹೋದರು. ಆರೋಪಿ ಚಾಸಾ-1 ರವರಿಗೆ ಹಲ್ಲೆ ಮಾಡಿದ್ದ ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ. ಚಾಸಾ-1 ರವರಿಗೆ ಹಲ್ಲೆ ಮಾಡಿದ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 2 ಮತ್ತು 3ನೇ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ. 1ನೇ ಆರೋಪಿ ಗೈರು ಹಾಜರಾಗಿದ್ದು, ಅವರನ್ನು ಗುರುತಿಸಿಸುವ ಬಗ್ಗೆ ಆರೋಪಿಯ ಪರ ವಕೀಲರು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

**13**. ಅಭಿಯೋಜನೆಯವರು ಆರೋಪಿಯ ವಿರುದ್ದ ಆರೋಪಿಸಿರುವ ಅಪಾದನೆಯನ್ನು ಸಾಬೀತು ಪಡಿಸುವ ನಿಟ್ಟಿನಲ್ಲಿ **ಚಾಸಾ 2 ರವರನ್ನು ಪ್ರಾಸಾ 3** ಎಂದು ವಿಚಾರಣೆಗೆ ಒಳಪಡಿಸಿದ್ದು, ಚಾಸಾ-1 ಮತ್ತು ಆರೋಪಿತರ ಪರಿಚಯವಿರುತ್ತದೆ. ದಿಃ 09.03.2021 ರಂದು 8.00 ರಿಂದ 8.30 ಗಂಟೆಗೆ ನಾನು ತೋಟದಲ್ಲಿ ಇರುವಾಗ ಆರೋಪಿತರು ತಮ್ಮ ತೋಪಿನಲ್ಲಿ ಕೆಲಸ ಮಾಡಿಸುತ್ತಿದ್ದರು. ಆಗ ಚಾಸಾ-1 ರವರು ಬಂದು ಈಗ ವ್ಯಾಜ್ಯವು ನ್ಯಾಯಾಲಯದಲ್ಲಿರುವುದರಿಂದ ಈ ರೀತಿ ಮಾಡಬಾರದು ಎಂದು ಹೇಳಿದ್ದು ಆಗ ಗಲಾಟೆ ಪ್ರಾರಂಭವಾಗಿರುತ್ತದೆ. ಆಗ ಆರೋಪಿಗಳು ಬೈಯ್ಯಲು ಪ್ರಾರಂಭಿಸಿ ಆಗ 2 ಮತ್ತು 3ನೇ ಆರೋಪಿ ಚಾಸಾ-1 ರವರ ಕುತ್ತಿಗೆ ಪಟ್ಟಿಯನ್ನು ಹಿಡಿದುಕೊಂಡಿದ್ದು 1ನೇ ಆರೋಪಿಯು ದೊಣ್ಣೆಯನ್ನು ತೆಗೆದುಕೊಂಡು ಚಾಸಾ-1 ರವರ ಬೆನ್ನಿಗೆ ಹೊಡೆದಾಗ ಮೂರ್ಛೆ ಹೋಗಿರುತ್ತಾರೆ. ನಂತರ ನಾನು ಚಾಸಾ-3 ರವರಿಗೆ ದೂರವಾಣಿ ಕರೆ ಮಾಡಿ ತಿಳಿಸಿದ್ದು ಅವರು ಬಂದು ಚಾಸಾ-1 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಂತರ 11.03.2021 ರಂದು ಪೋಲಿಸರು ಮಹಜರ್ ಗೆ ಬಂದಿದ್ದು ಮಹಜರ್ ಮಾಡಿ ಸ್ಥಳದಲ್ಲಿ ಇದ್ದ ದೊಣ್ಣೆಯನ್ನು ಸ್ವಾಧೀನ ಪಡೆದುಕೊಂಡಿರುತ್ತಾರೆ. ಸದರಿ ಮಹಜರ್ ನ್ನು ಬೆಳಿಗ್ಗೆ 10.00 ಗಂಟೆಯಿಂದ 10.30ರ ವರೆಗೆ ಮಾಡಿರುತ್ತಾರೆ. ಮಹಜರ್ ಸಮಯದಲ್ಲಿ ನನ್ನ ಜೊತೆ ಚಾಸಾ-6 ರವರು ಸಹ ಇದ್ದರು ಎಂದು ಸಾಕ್ಷ್ಯ ನುಡಿದಿರುತ್ತಾರೆ.

**14**. ಅಭಿಯೋಜನೆಯವರು ಆರೋಪಿಯ ವಿರುದ್ದ ಆರೋಪಿಸಿರುವ ಅಪಾದನೆಯನ್ನು ಸಾಬೀತು ಪಡಿಸುವ ನಿಟ್ಟಿನಲ್ಲಿ **ಚಾಸಾ 4 ರವರನ್ನು ಪ್ರಾಸಾ 4** ಎಂದು ವಿಚಾರಣೆಗೆ ಒಳಪಡಿಸಿದ್ದು, ಆರೋಪಿತರನ್ನು ನೋಡಿರುತ್ತೇನೆ. ಚಾಸಾ-1 ನನ್ನ ತಂದೆ, ಚಾಸಾ-2, 3 ಮತ್ತು 5 ರವರ ಪರಿಚಯ ಇರುತ್ತದೆ. ದಿಃ 09.03.2021 ರಂದು 8.00 ರಿಂದ 8.30 ಗಂಟೆಗೆ ಸುಮಾರಿಗೆ ನಮ್ಮ ಗ್ರಾಮದಲ್ಲಿರುವಾ ನೀಲಗಿರಿ ತೋಪನ್ನು ಕಡಿಯುತ್ತಿದ್ದಾರೆ ಎಂದು ಬೇರೆಯವರು ಹೇಳಿದ್ದು ಅದನ್ನು ನೋಡಲು ಚಾಸಾ-1 ರವರು ಹೋಗಿದ್ದರು. ನಂತರ ಅರ್ಧ ಗಂಟೆ ಕಳೆದರು ಸಹ ನಮಗೆ ಯಾವುದೇ ವಿಚಾರ ಗೊತ್ತಾಗಲಿಲ್ಲ. ಆ ಕಾರಣದಿಂದ ನಾನು ಕಾರಿನಲ್ಲಿ ನೀಲಗಿರಿ ತೋಪಿನ ಬಳಿ ಹೋದೆ. ಆ ಸಂಧರ್ಬದಲ್ಲಿ ನನ್ನ ತಂದೆ ಸುಸ್ತಾಗಿ ಕೆಳಗೆ ಬಿದ್ದಿದ್ದರು. ನಂತರ ನಾನು ಅವರನ್ನು ಹೋಗಿ ಎತ್ತಿ ಕೂರಿಸಿ ವಿಚಾರಿಸಿದಾಗ, ಚಾಸಾ-1 ರವರಿಗೆ ಆರೋಪಿಗಳು ಹಲ್ಲೆ ಮಾಡಿರುವುದಾಗಿ

ತಿಳಿಸಿದರು. ಆ ಪೈಕಿ 2ನೇ ಆರೋಪಿ ಬೆನ್ನಿಗೆ ಹೊಡೆದ್ದಿರು ಎಂದು ಹೇಳಿದರು. ನಂತರ ಆರೋಪಿಗಳು ನನಗೆ ಸೂಳೆ ಮಗನೇ, ಬೋಳಿ ಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದು ಮತ್ತೆ ನೀನು ಇಲ್ಲಿಗೆ ಬಂದರೆ ನಿನಗೆ ಗತಿ ಕಾಣಿಸುತ್ತೇನೆ ಎಂದು ಹೇಳಿದ್ದರು ಎಂದು ನನ್ನ ತಂದೆ ನನಗೆ ಹೇಳಿದರು. ನಂತರ ಚಾಸಾ-3 ರವರ ಸಹಾಯದೊಂದಿಗೆ ನನ್ನ ತಂದೆಯನ್ನು ಹತ್ತಿರದ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಆ ಸಂಧರ್ಬದಲ್ಲಿ ವೈದ್ಯರಿಗೆ ಗಲಾಟೆಯ ಬಗ್ಗೆ ತಿಳಿಸಿದಾಗ ಅವರು ಒಂದು ಮಾತ್ರೆ ನೀಡಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ತಿಳಿಸಿದರು. ನಂತರ ಚಾಸಾ-5 ರವರು ನನ್ನ ತಂದೆಯನ್ನು ಯಲಹಂಕ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಈ ಬಗ್ಗೆ ಪೋಲಿಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ನನ್ನ ತಂದೆಗೆ ಹಲ್ಲೆ ಮಾಡಿದ್ದ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಆರೋಪಿಗಳನ್ನು ನೊಡಿ ಗುರುತಿಸಿರುತ್ತಾರೆ.

**15.** ಅಭಿಯೋಜನೆಯವರು ಆರೋಪಿಯ ವಿರುದ್ದ ಆರೋಪಿಸಿರುವ ಅಪಾದನೆಯನ್ನು ಸಾಬೀತು ಪಡಿಸುವ ನಿಟ್ಟಿನಲ್ಲಿ **ಚಾಸಾ 8 ರವರನ್ನು ಪ್ರಾಸಾ 5** ಎಂದು ವಿಚಾರಣೆಗೆ ಒಳಪಡಿಸಿದ್ದು, ದಿ 10.03.2021 ರಂದು ರಾತ್ರಿ 9.00 ಗಂಟೆಗೆ ನಾನು ಠಾಣ ಪ್ರಭಾರದಲ್ಲಿದ್ದಾಗ ಚಾಸಾ-1 ನೀಡಿದ ದೂರನ್ನು ಪಡೆದುಕೊಂಡು ನಮ್ಮ ಠಾಣ ಮೊಕ್ಕದ್ದಮೆ ಸಂಖ್ಯೆ 47/2021 ರಂತೆ ಪ್ರ.ವ. ವರದಿಯನ್ನು ದಾಖಲಿಸಿ ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ದಿ 11.03.2021 ರಂದು ತನಿಖೆಯನ್ನು ಮುಂದುವರಿಸಿ ಪಂಚರಾದ ಚಾಸಾ-2 ಮತ್ತು 3 ರವರನ್ನು ಕರೆಯಿಸಿಕೊಂಡು ಚಾಸಾ-1 ರವರು ತೋರಿಸಿದ ಸ್ಥಳವನ್ನು ಕೃತ್ಯಕ್ಕೆ ಉಪಯೋಗಿಸಿದ್ದ ನೀಲಗಿರಿ ದೊಣ್ಣೆಯನ್ನು ಸ್ವಾಧೀನ ಪಡಿಸಿಕೊಂಡಿರುತ್ತೇನೆ. ಸ್ಥಳದಲ್ಲಿ ಸ್ವಾಧೀನ ಪಡಿಸಿದ ನೀಲಗಿರಿ ದೊಣ್ಣೆಯನ್ನು ನೋಡಿದರೆ ಗುರುತಿಸಿರುತ್ತಾರೆ. ನಂತರ ಠಾಣೆಗೆ ವಾಪಸ್ಸು ಆಗಿ ಸ್ವಾಧೀನ ಪಡಿಸಿದ ವಸ್ತುವನ್ನು ಸ್ವತ್ತು ಪಟ್ಟಿಯಲ್ಲಿ ಅಳವಡಿಸಿರುತ್ತೇನೆ. ಅದೇ ದಿನ ಚಾಸಾ-2 ರಿಂದ 5 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿ 12.03.2021 ರಂದು ಚಾಸಾ-1 ರವರು ಚಿಕಿತ್ಸೆ ಪಡೆದುಕೊಂಡ ಯಲಹಂಕ ಆಸ್ಪತ್ರೆಗೆ ಗಾಯದ ಪ್ರಮಾಣ ಪತ್ರವನ್ನು ಪಡೆಯಲು ಮನವಿ ಸಲ್ಲಿಸಿರುತ್ತೇನೆ. ಅದೇ ದಿನ ಆರೋಪಿಗಳು ಠಾಣೆಗೆ ಹಾಜರಾಗಿದ್ದು, ಅವರನ್ನು ವಿಚಾರಣೆ ಮಾಡಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ

ಮಾಡಿರುತ್ತೇನೆ. ಸದರಿ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಉಳಿದ ಆರೋಪಿಗಳು ಗೈರು ಹಾಜರಾಗಿದ್ದು, ಅವರನ್ನು ಗುರುತಿಸುವ ಬಗ್ಗೆ ಆರೋಪಿಯ ಪರ ವಕೀಲರು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ. ದಿ 25.03.2021 ರಂದು ಚಾಸಾ-1 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿರುತ್ತೇನೆ. ತನಿಖೆಯು ಮುಕ್ತಾಯವಾಗಿದ್ದು ಸಾಕಷ್ಟು ಸಾಕ್ಷದಾರಗಳಿದ್ದ ಕಾರಣ ಆರೋಪಿಗಳ ವಿರುದ್ಧ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**16**. ಅಭಿಯೋಜನೆಯವರು ಆರೋಪಿಯ ವಿರುದ್ದ ಆರೋಪಿಸಿರುವ ಅಪಾದನೆಯನ್ನು ಸಾಬೀತು ಪಡಿಸುವ ನಿಟ್ಟಿನಲ್ಲಿ **ಚಾಸಾ 7 ರವರನ್ನು ಪ್ರಾಸಾ 6** ಎಂದು ವಿಚಾರಣೆಗೆ ಒಳಪಡಿಸಿದ್ದು, ದಿನಾಂಕ 09.03.2021 ರಂದು ಮಧ್ಯಾಹ್ನ 2.55 ರ ಸುಮಾರಿಗೆ ನಾನು ಕರ್ತವ್ಯದಲ್ಲಿದ್ದಾಗ ಬೂದಿಗೆರೆ ಗ್ರಾಮದ ಮುನಿರೆಡ್ಡಿ ಎಂಬ ರೋಗಿಯನ್ನು ಅವರ ಮಗ ವೆಂಕಟೇಶ್ ಅವರು 09.03.2021 ರಂದು ಬೆಳಿಗ್ಗೆ 8.00 ರ ಸುಮಾರಿಗೆ ಹಲ್ಲೆಯ ಇತಿಹಾಸದೊಂದಿಗೆ ನಮ್ಮ ಆಸ್ಪತ್ರೆಗೆ ಕರೆತಂದರು. ಆ ರೋಗಿಯನ್ನು ಪರೀಕ್ಷಿಸಿದಾಗ ನನಗೆ ಯಾವುದೇ ಬಾಹ್ಯ ಗಾಯಗಳು ಕಂಡುಬಂದಿಲ್ಲ, ಆದರೆ ಎಡ ಭುಜದವರೆಗೆ ನೋವು ಸೇರಿದಂತೆ ಸೀಮಿತ ಚಲನೆ ಕಂಡುಬಂದಿದೆ. ನನ್ನ ಅಭಿಪ್ರಾಯದಲ್ಲಿ ಗಾಯಗಳು ಸರಳ ಸ್ವರೂಪದ್ದಾಗಿವೆ. ಹೇಳಲಾದ ಗಾಯಗಳು ಕೋಲಿನಿಂದ ಹೊಡೆದ ಕಾರಣ ಉಂಟಾಗಿರಬಹುದು ಎಂದು ಸೂಚಿಸುವುದು ನಿಜ. ಈ ನಿಟ್ಟಿನಲ್ಲಿ ನಾನು ದಿನಾಂಕ 25.03.2021 ರಂದು ಗಾಯದ ಪ್ರಮಾಣಪತ್ರವನ್ನು ನೀಡಿದ್ದೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**17.** ಸದರಿ ಪ್ರಕರಣದಲ್ಲಿ ಆರೋಪಿಯ ವಿರುದ್ದ ಅಪರಾಧದ ಸಾಬೀತಿಗಾಗಿ ಪ್ರಾಸಾ.1 ರಿಂದ 6 ರವರನ್ನು ವಿಚಾರಣೆಗೆ ಒಳಪಡಿಸಿರುತ್ತಾರೆ, ಪ್ರಾಸಾ.1 ರವರು ಪಿರ್ಯಾದುದಾರರು ಮತ್ತು ಗಾಯಾಳು ಆಗಿರುತ್ತಾರೆ. ಇವರು ತನ್ನ ಮುಖ್ಯ ವಿಚಾರಣೆಯಲ್ಲಿ ಘಟನಾ ಸ್ಥಳಕ್ಕೆ ತಾನು ಮತ್ತು ತನ್ನ ಹೆಂಡತಿ ಹೋಗಿದ್ದು ಆರೋಪಿಗಳು ತನ್ನ ಮೇಲೆ ಹಲ್ಲೆ ಮಾಡಿದ್ದಾಗ ತನ್ನ ಹೆಂಡತಿ ಯಾರಿಗೂ ದೂರವಾಣಿ ಕರೆ ಮಾಡಿದರು ಎಂದು ಹೇಳಿರುತ್ತಾರೆ. ಆದರೆ ನಿಪಿ-1 ದೂರಿನಲ್ಲಿ ತನ್ನ ಜೊತೆ ತನ್ನ ಹೆಂಡತಿ ಬಂದಿದ್ದ ವಿಚಾರವನ್ನು ಹೇಳಿರುವುದಿಲ್ಲ.

ಚಾಸಾ-1 ರವರ ಹೆಂಡತಿ ಸ್ಥಳದಲ್ಲಿದ್ದು ಘಟನೆಯನ್ನು ನೋಡಿರುವ ಬಗ್ಗೆ ನಿಪಿ-1 ದೂರಿನಲ್ಲಿ ನಮೂದಿಸಿರುವುದಿಲ್ಲ. ಅಲ್ಲದೇ ಚಾಸಾ-1 ರವರ ಹೆಂಡಡಿಯನ್ನು ಈ ಪ್ರಕರಣದಲ್ಲಿ ಸಾಕ್ಷಿದಾರರಾಗಿ ಮಾಡಿರುವುದಿಲ್ಲ ಮತ್ತು ಅವರನ್ನು ವಿಚಾರಣೆಗೆ ಒಳಪಡಿಸಿರುವುದಿಲ್ಲ. ಆದ್ದರಿಂದ ನಿಪಿ-1 ದೂರಿನಲ್ಲಿರುವ ಅಂಶಗಳಿಗೂ ಪ್ರಾಸಾ-1 ರವರು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಅಂಶಗಳಿಗೂ ಸಾಕಷ್ಟು ವ್ಯತ್ಯಾಸ ಕಂಡುಬರುತ್ತದೆ. ಅಲ್ಲದೇ ಪ್ರಾಸಾ-1 ರವರು ತನ್ನ ಮುಖ್ಯ ವಿಚಾರಣೆಯಲ್ಲಿ ಆರೋಪಿಗಳು ನೀಲಗಿರಿ ಮರಗಳನ್ನು ಕಡಿಸುತ್ತಿದ್ದರು ಎಂದು ಹೇಳಿದ್ದು ಈ ವಿಚಾರವನ್ನು ನಿಪ-1 ದೂರಿನಲ್ಲಿ ಹೇಳಿರುವುದಿಲ್ಲ. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಪ್ರಾಸಾ-1 ರವರ ಸಾಕ್ಷ್ಯಕ್ಕೂ ಮತ್ತು ನಿಪ-1 ದೂರಿನಲ್ಲಿರುವ ಅಂಶಗಳಿಗೂ ಸಾಕಷ್ಟು ವ್ಯತ್ಯಾಸ ಕಂಡುಬರುತ್ತದೆ.

**18.** ಪ್ರಾಸಾ-2 ಮತ್ತು 3ರವರು ಪ್ರತ್ಯಕ್ಷ ಸಾಕ್ಷಿದಾರಾರಗಿ ಎಂದು ಹೇಳಲಾಗಿದ್ದು ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಆದರೆ ತಮ್ಮ ಪಾಟಿ ಸವಾಲಿನಲ್ಲಿ ತಮ್ಮಗೂ ಮತ್ತು ಚಾಸಾ-1 ರವರಿಗೂ ವಿಶ್ವಾಸ ಚೆನ್ನಾಗಿದೆ ಎಂದು ನುಡಿದಿರುತ್ತಾರೆ. ಚಾಸಾ-1 ರವರಿಗೂ ಹಾಗೂ ಆರೋಪಿಗಳಿಗೂ ಸರ್ವೆ ನಂ.91/8 ರ ವಿಚಾರವಾಗಿ ಸಿವಿಲ್ ದಾವೆಯನ್ನು ಇರುವುದನ್ನು ಚಾಸಾ-1 ರವರು ಒಪ್ಪಿಕೊಂಡಿರುತ್ತಾರೆ. ಘಟನೆ ಬೆಳಿಗ್ಗೆ 8.30ರ ಸಮಯದಲ್ಲಿ ನಡೆದಿದೆ ಎಂದು ಹೇಳಿದ್ದು ಪ್ರಾಸಾ-2 ಮತ್ತು 3ರವರನ್ನು ಹೊರತು ಪಡಿಸಿ ಬೇರೆ ಯಾರನ್ನು ಈ ಪ್ರಕರಣದಲ್ಲಿ ವಿಚಾರಣೆ ಒಳಪಡಿಸಿರುವುದಿಲ್ಲ. ಆದ್ದರಿಂದ ಪ್ರಾಸಾ-1 ರಿಂದ 3 ರವರು ಹಿತಾಸಕ್ತಿ ಹೊಂದಿದ ಸಾಕ್ಷಿದಾರರಾಗಿರುತ್ತಾರೆ. ಇವರನ್ನು ಹೊರತು ಪಡಿಸಿ ಬೇರೆ ಸ್ವತಂತ್ರ ಸಾಕ್ಷಿದಾರರನ್ನು ವಿಚಾರಣೆ ಒಳಪಡಿಸಿರುವುದಿಲ್ಲ. ಇದು ಅಭಿಯೋಜನೆ ಪ್ರಕರಣವನ್ನು ಅನುಮಾನದಿಂದ ನೋಡುವಂತೆ ಮಾಡುತ್ತದೆ. ಅಪರಾಧಿಕ ನ್ಯಾಯಶಾಸ್ತ್ರದ ಪ್ರಕಾರ ಆರೋಪವನ್ನು ಸಂಶಯತೀತವಾಗಿ ರುಜುವಾತು ಪಡಿಸುವ ಹೊಣೆಗಾರಿಕೆ ಸಂಪೂರ್ಣವಾಗಿ ಅಭಿಯೋಜನೆ ಮೇಲೆ ಇರುತ್ತದೆ. ಆದ್ದರಿಂದ ಆರೋಪಿಯು ಅಭಿಯೋಜನೆ ಹೊರಿಸಿದ ಅಪರಾಧವನ್ನು ಮಾಡಿರುತ್ತಾರೆ ಎಂಬುದನ್ನು ಸಂಶಯತೀತವಾಗಿ ರುಜುವಾತುಪಡಿಸಲು ಅಭಿಯೋಜನೆಯು ವಿಫಲವಾಗಿರುತ್ತದೆ. ಆದ್ದರಿಂದ ಸಂಶಯದ ಲಾಭವನ್ನು ಆರೋಪಿಗೆ ನೀಡಿ ಮೇಲೆ ವಿವರಿಸಿದಂತೆ ಕಾರಣ

ಮತ್ತು ಸಂಧರ್ಬಳಿಗನುಗುಣವಾಗಿ ಆರೋಪಿಯನ್ನು ಸದರಿ ಆಪಾಧನೆಯಿಂದ ದೋಷ ಮುಕ್ತಗೊಳಿಸುವುದು ಸೂಕ್ತವೆಂದು ಕಂಡು ಬರುತ್ತದೆ. ಆದ್ದರಿಂದ ಅಂಶ **1** ರಿಂದ **4** ನ್ನು **ನಕಾರಾತ್ಮಕವಾಗಿ** ಉತ್ತರಿಸಲಾಗಿದೆ.

**19.** **ಅಂಶ ಸಂಖ್ಯೆ:5:-** ಈ ಮೇಲೆ ಹೇಳಿರುವ ಕಾರಣಗಳಿಗಾಗಿ ತಲುಪಿರುವ ತೀರ್ಮಾನ ಮತ್ತು ಅಭಿಪ್ರಾಯಗಳಿಗೆ ಅನುಗುಣವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ**

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ 1 ರಿಂದ 3ನೇ ಆರೋಪಿಗಳ ವಿರುದ್ದ ಭಾರತೀಯ ದಂಡ ಸಂಹಿತೆ ಕಲಂ 323, 324, 504, 506 ಸಹವಾಚಕ 34ರಡಿಯಲ್ಲಿ ಹೊರಿಸಿರುವ ಆಪಾದನೆಗಳಿಂದ ಸದರಿ ಆರೋಪಿಗಳು ದೋಷಮುಕ್ತರೆಂದು ಘೋಷಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿಗಳು ಹಾಗೂ ಅವರ ಜಾಮೀನುದಾರರು ಬರೆದುಕೊಟ್ಟ ಜಾಮೀನು ಮುಚ್ಚಳಿಕೆ ಪತ್ರಗಳು ಅಫೀಲಿನ ಅವಧಿ ಮುಗಿದ ನಂತರ ರದ್ದುಗೊಳ್ಳತಕ್ಕದ್ದು.

ಈ ಪ್ರಕರಣದಲ್ಲಿ ಪಿ.ಎಫ್.ನಂ.**47/2021** ರಡಿಯಲ್ಲಿ ಅಮಾನತು ಪಡಿಸಿಕೊಳ್ಳಲಾದ ನೀಲಗಿರಿ ದೊಣ್ಣೆ **(ಮು.ಮಾ-1)** ಅನುಪಯುಕ್ತ ವಸ್ತು ಆಗಿರುವುದರಿಂದ ಅಫೀಲಿನ ಅವಧಿ ಮುಗಿದ ನಂತರ ಅದನ್ನು ನಾಶಪಡಿಸಲು ಆದೇಶಿಸಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮುಖಾಂತರ ಬೆರಳಚ್ಚು ಪಡಿಸಿದ್ದು ನಂತರ ತಪ್ಪುಗಳನ್ನು ತಿದ್ದಿ ತೆರೆದ ನ್ಯಾಯಾಲಯದಲ್ಲಿ ದಿನಾಂಕಃ **9ನೇ ಏಪ್ರಿಲ್ 2026** ರಂದು ಓದಲಾಯಿತು.)

**(ವೆಂಕಟೇಶ.ಎನ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ,**
**ದೇವನಹಳ್ಳಿ.**

**ಅನುಬಂಧ**

**ಅಭಿಯೋಜನೆಯ ಪರ ವಿಚಾರಣೆಯಾದ ಸಾಕ್ಷಿದಾರರ ಪಟ್ಟಿಃ**

ಪ್ರಾಸಾ 1 : ಮುನಿರೆಡ್ಡಿ

| | | |
|---|---|---|
| ಪ್ರಾಸಾ 2 | : | ಪ್ರಕಾಶ್ |
| ಪ್ರಾಸಾ 3 | : | ವೆಂಕಟೇಶ್ |
| ಪ್ರಾಸಾ 4 | : | ರಾಮಾಂಜಿನಪ್ಪ |
| ಪ್ರಾಸಾ 5 | : | ಶ್ರೀಮತಿ. ವಿದ್ಯಾ ರಾಥೋಡ್ |
| ಪ್ರಾಸಾ 6 | : | ಡಾ. ಬಿ.ಹಚ್. ಗಣೇಶ್ |

**ಅಭಿಯೋಜನೆಯ ಪರ ಗುರುತಿಸಿದ ದಾಖಲಾತಿಗಳ ಪಟ್ಟಿ.**

| | | |
|---|---|---|
| ನಿಪಿ:1 | : | ಹೇಳಿಕೆ/ದೂರು |
| ನಿಪಿ:1(ಎ) | : | ಪ್ರಾಸಾ 1 ರವರ ಸಹಿ |
| ನಿಪಿ:1(ಬಿ) | : | ಪ್ರಾಸಾ 5 ರವರ ಸಹಿ |
| ನಿಪಿ:2 | : | ಮಹಜರ್ |
| ನಿಪಿ:2(ಎ) | : | ಪ್ರಾಸಾ 1 ರವರ ಸಹಿ |
| ನಿಪಿ:2(ಬಿ) | : | ಪ್ರಾಸಾ 3 ರವರ ಸಹಿ |
| ನಿಪಿ:2(ಸಿ) | : | ಪ್ರಾಸಾ 5 ರವರ ಸಹಿ |
| ನಿಪಿ:3 | : | ಪ್ರ.ಮಾ.ವರದಿ |
| ನಿಪಿ:3(ಎ) | : | ಪ್ರಾಸಾ 5 ರವರ ಸಹಿ |
| ನಿಪಿ:4 | : | ಮನವಿ ಪತ್ರ |
| ನಿಪಿ:4(ಎ) | : | ಪ್ರಾಸಾ 5 ರವರ ಸಹಿ |
| ನಿಪಿ:5 | : | ಗಾಯದ ಪ್ರಮಾಣ ಪತ್ರ |
| ನಿಪಿ:5(ಎ) | : | ಪ್ರಾಸಾ 5 ರವರ ಸಹಿ |
| ನಿಪಿ:5(ಬಿ) | : | ಪ್ರಾಸಾ 6 ರವರ ಸಹಿ |

**ಆರೋಪಿಗಳ ಪರ ವಿಚಾರಣೆಯಾದ ಸಾಕ್ಷಿ ಗಳು:**

-ಇಲ್ಲ -

**ಆರೋಪಿಗಳ ಪರ ಗುರುತಿಸಿದ ದಾಖಲೆಗಳು:**

-ಇಲ್ಲ-

**ಅಭಿಯೋಜನೆಯ ಪರ ಗುರುತಿಸಿದ ಮುದ್ದೆ ಮಾಲುಗಳು:**

| | | |
|---|---|---|
| ಮು.ಮಾ-1 | : | ದೊಣ್ಣೆ |

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ,**
**ದೇವನಹಳ್ಳಿ.**